ಅದೇ ವರ್ತನೆ' ಕೃತಜ್ಞತೆಯ ಕಣ್ಣೀರು ಅವನ ಕಣ್ಣಲ್ಲಿ. ಅವನ ಮಾತುಗಳು ನನ್ನ ಮನದಲ್ಲೂ ನಾಟುತ್ತಿದ್ದವು. ಹೌದು, ಅವನ ಸ್ವಭಾವವೇ ಹಾಗೆ. ವಿಸ್ಕಿಯನ್ನೂ, ಇಂಪೋರ್ಟೆಡ್ ಸಿಗರೇಟುಗಳನ್ನೂ ನನಗಾಗಿ ಗೋವೆಯಿಂದ ತರಿಸಿ ಸ್ಟಾಕ್ ಇಡುತ್ತಿದ್ದ. ಅವನು ಮಾಂಸ ತಿನ್ನುತ್ತಿರಲಿಲ್ಲವಾದರೂ ತಿಂಗಳಿಗೊಮ್ಮೆಯಾದರೂ ಮಾಂಸ ಹೊಡೆಸಿಕೊಂಡು ಬರುತ್ತಿದ್ದ. ನನ್ನವಳು ಅವನಿಗಾಗಿ ಕೋಳಿಮೊಟ್ಟೆಯ ಪಲ್ಯವನ್ನೋ, ಸಿಹಿ ತಿಂಡಿಯನ್ನೋ ಮಾಡಿಡುತ್ತಿದ್ದಳು.

ನಾಡಕರ್ಣಿ ಬಂದು ಹೋದದ್ದು ನನಗೆ ತುಂಬಾ ಉಪಕಾರವಾಗಿತ್ತು. ನಾಡಕರ್ಣಿಯಲ್ಲೂ ಕೂಡ ನನಗಿಂತಲೂ ಗಂಭೀರವಾಗಿಯೇ ವರ್ತಿಸಿದ್ದ ದಿವಾಕರನ ಬಗ್ಗೆ ಕೋಪ ಬಂತು. ಎಂತಹ ವಿಪರೀತದ ಮನುಷ್ಯ ಇವ ಎನಿಸಿತು. ಇಷ್ಟಕ್ಕೂ ಈ ಕುಮುದ ಯಾರು? ಎಂಟು ವರುಷಗಳ ಹಿಂದೆಯೇ ಈ ಹೆಸರು ಅವನ ಬಾಯಿಂದ ಹೊರಬಂದಿರಬೇಕಾದರೆ... ಈ ಎರಡು ವ್ಯಕ್ತಿಗಳ ಮಧ್ಯೆ ಏನಾದರೂ ನಡೆದಿರಬೇಕೆಂದುಕೊಂಡೆ. ಅಕಸ್ಮಾತ್ ಈ ನಾಡಕರ್ಣಿಯ ಅಡ್ರೆಸ್ಸು ನನಗೆ ಸಿಗದೇ ಇದ್ದಿದ್ದರೆ ಹೇಗೆ? ಎಂದು ಕಲ್ಪಿಸಿಕೊಂಡು ಭಯಪಟ್ಟೆ. ಮೊದಲು ಕುಮುದಳನ್ನು ಮುಖಾಮುಖಿಯಾಗಿ ಭೇಟಿ ಮಾಡಿ ದಿವಾಕರನ ಸಾವನ್ನು, ಮನೆಯನ್ನು ಅವಳ ಹೆಸರಿಗೆ ಬರೆದಿರುವ ವಿಷಯವನ್ನು ತಿಳಿಸಿ ನಂತರ ದಿವಾಕರನ ಊರಿಗೆ ಹೋಗಿ ಅವನ ತಂದೆ–ತಾಯಿಗಳನ್ನು ನೋಡಬೇಕು.

ಎರಡು ದಿನ ರಜ ಬರೆದು ಭದ್ರಾವತಿಗೆ ಹೋಗಲು ತೀರ್ಮಾನಿಸಿದೆ. ಎಂಟು ಸಾವಿರ ರೂಪಾಯಿ ಹಣವನ್ನು, ಮನೆಯ ಅಧಿಕಾರದ ಪತ್ರವನ್ನು ಬ್ಯಾಗಿನಲ್ಲಿಟ್ಟುಕೊಂಡು ಭದ್ರಾವತಿಯ ಬಸ್ಸು ಹತ್ತಿದೆ.

ನಾಡಕರ್ಣಿ ಹೇಳಿದ್ದ ಸ್ಕೂಲಿನ ಹತ್ತಿರ ಹೋದೆ. ಹೆಡ್‌ಮಾಸ್ಟರ್ ಬಳಿ ಹೋಗಿ ಕುಮುದ ಟೀಚರ್‌ಗಾಗಿ ಕೇಳಿದೆ. 'ಅವರದು ಬೆಳಿಗ್ಗೆ ಕ್ಲಾಸು. ಮುಗಿಸಿಕೊಂಡು ಗಂಟೆ ಹಿಂದೆ ಹೋದ್ರು' ಎಂದು ನನ್ನನ್ನು ಅಡಿಯಿಂದ ಮುಡಿಯವರೆಗೂ ಆಶ್ಚರ್ಯದಿಂದ ನೋಡಿದ್ದರು ಹೆಡ್‌ಮಾಸ್ಟರ್. 'ಅವರನ್ನು ಕಾಣಬೇಕು. ಅವರ ಮನೆಯ ಅಡ್ರೆಸ್ಸು ಬೇಕಿತ್ತು ಸಾರ್, ನಾನು ಕಾರವಾರದಿಂದ ಬಂದಿದ್ದೀನಿ' ನನ್ನ ಆತುರ ಅವರಿಗೆ ಅರಿವಾಗಿರಬೇಕು. ಜವಾನನ್ನು ಕರೆದು 'ಇವರಿಗೆ ಕುಮುದ ಟೀಚರ್ ಮನೆ ತೋರಿಸಿ ಬಾ' ಎಂದು ಹೇಳಿದರು. ಜವಾನನ್ನು ಹಿಂಬಾಲಿಸಿದೆ. 'ಇಲ್ಲೆ ಹತ್ತಿರ ಬನ್ನಿ ಸಾರ್' ಎಂದು ಒಂದೂವರೆ ಫರ್ಲಾಂಗ್ ನಡೆದು ಒಂದು ಚಿಕ್ಕ ಮನೆಯನ್ನು ತೋರಿಸಿ 'ನೋಡಿ ಸಾರ್, ಅದೇ ಅವರ ಮನೆ. ಆ ಟೀಚರ್ ಒಂದು ತರದವರು ಸಾರ್, ಪಾಪ...' ಎಂದು ಜವಾನ ಹಿಂತಿರುಗಲನುವಾದ. ಜೇಬಿನಿಂದ ಎರಡು ರೂಪಾಯಿ ನೋಟು ತೆಗೆದು ಅವನಿಗೆ ಕೊಡಹೋದಾಗ ಅವನು ಬೇಡವೆಂದ. ಬಲವಂತಪಡಿಸಿದ ಮೇಲೆ ತೆಗೆದುಕೊಂಡ. ಕಣ್ಣರಳಿಸಿ ನೋಡಿ ಹೊರಟು ಹೋದ.

ಮನೆಯ ಬಾಗಿಲು ಮುಚ್ಚಿತ್ತು, ಬಾಗಿಲು ತಟ್ಟಿದೆ. ಎರಡು ಮೂರು ಬಾರಿ ತಟ್ಟಿದ ನಂತರ ಮುವತ್ತು ದಾಟಿದ ಹೆಣ್ಣೊಂದು ಬಾಗಿಲು ತೆರೆಯಿತು. ಬಹಶಃ ಅಪರಿಚಿತ ವ್ಯಕ್ತಿಯಾದ ನನ್ನನ್ನು ನೋಡಿ ಚಕಿತಗೊಂಡಿರಬೇಕು. ಅವಳ ಮೈಗೆ ತಕ್ಕನಾದ ಸುಂದರ ಮುಖದಲ್ಲಿ ಪ್ರಶ್ನಾರ್ಥಕ ದೃಷ್ಟಿಯನ್ನು ಗಮನಿಸಿದೆ.

'ಕುಮುದಾ ನೀವೇನಾ?...' ಪ್ರಶ್ನಿಸಿದ್ದೆ.

'ಹೌದು, ತಾವು ಯಾರೆಂದು...' ಅವಳ ಮಾತನ್ನು ತುಂಡರಿಸಿ ಹೇಳಿದ್ದೆ.

'ನಾನು ಚಂದ್ರ ಅಂತ. ಕಾರವಾರದಿಂದ ಬಂದಿದ್ದೀನಿ. ನಿಮ್ಮನ್ನು ಕಾಣಬೇಕಿತ್ತು' ಅವಳ